# ಖಾಲಿ ಹೊಲದೆಡೆಗೆ ಪ್ರವೇಶ




ದೇವರ ರಾಜ್ಯದ ಬೆಳವಣಿಗೆಯು ಖಾಲಿ ಜಾಗವನ್ನು ಪ್ರವೇಶಿಸುವ ವಿಶ್ವಾಸಿಗಳಿಂದ ಪ್ರಾರಂಭವಾಗುತ್ತದೆ. ಈ ಖಾಲಿ ಜಾಗವು ಯೇಸುವನ್ನು ಅನುಸರಿಸದ ಜನರು. ನಂಬಿಕೆಯಿಲ್ಲದಂತ ಕೆಲವರು ನಮಗೆ ತಿಳಿದಂಥ ವ್ಯಕ್ತಿಗಳಾಗಿರುತ್ತಾರೆ, ಮತ್ತು ಇನ್ನೂ ಕೆಲವರು ನಾವು ಭೇಟಿಯಾಗಿರದೇ ಇರುವವರಾಗಿರುತ್ತಾರೆ. ದೇವರ ರಾಜ್ಯವು ಬೆಳೆಯಲು ಖಾಲಿ ಜಾಗವನ್ನು ಹೇಗೆ ಪ್ರವೇಶಿಸಬೇಕು ಎಂದು ನಾವು ತಿಳಿದಿರಬೇಕು.

## ನಾವು ಇನ್ನೂ ಭೇಟಿಯಾಗದ ಜನರ ಖಾಲಿ ಜಾಗವನ್ನು ಪ್ರವೇಶಿಸುವುದು ಹೇಗೆ?

ಲೂಕ 10:1–12:

ಇದಾದ ಮೇಲೆ ಸ್ವಾಮಿಯು ಇನ್ನೂ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ ತಾನು ಹೋಗಬೇಕೆಂದಿದ್ದ ಪ್ರತಿಯೊಬ್ಬರಿಗೂ ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು, ಕಳುಹಿಸುವಾಗ ಅವರಿಗೆ ಹೇಳಿದ್ದೇನೆಂದರೆ – ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು – ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ. ಹೋಗಿರಿ ತೋಳಗಳ ನಡುವೆ ಕುರಿಮರಿಗಳನ್ನು ಹೊಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿ ಕೊಡುತ್ತೇನೆ. ನೋಡಿರಿ. ಹಣದ ಚೀಲವನ್ನಾಗಲೀ ಹಸಿಬೆಯನ್ನಾಗಲೀ ಕೆರಗಳನ್ನಾಗಲೀ ತೆಗೆದುಕೊಮಡು ಹೋಗಬೇಡಿರಿ; ದಾರಿಯಲ್ಲಿ ಯಾರನ್ನೂ ವಂದಿಸಬೇಡಿರಿ. ಇದಲ್ಲದೇ ನೀವು ಯಾವ ಮನೆಯೊಳಗೆ ಹೋದರೂ – ಈ ಮನೆಗೆ ಶುಭವಾಗಲಿ ಎಂದು ಮೊದಲು ಹೇಳಿರಿ. ಆಶೀರ್ವಾದಪಾತ್ರನು ಅಲ್ಲಿ ಇದ್ದರೆ ನಿಮ್ಮ ಆಶೀರ್ವಾದವು ಅವನ ಮೇಲೆ ನಿಲ್ಲುವುದು; ಇಲ್ಲದಿದ್ದರೆ ಅದು ನಿಮಗೇ ಹಿಂತಿರುಗುವುದು. ಆ ಮನೆಯಲ್ಲೇ ಇದ್ದುಕೊಂಡು ಅವರು ಕೊಡುವಂಥದ್ದನ್ನು ಊಟಮಾಡಿರಿ, ಕುಡಿಯಿರಿ ಆಳು ತನ್ನ ಕೂಲಿಗೆ ಯೋಗ್ಯನಷ್ಟೆ. ಒಂದು

ಮನೆಯನ್ನು ಬಿಟ್ಟು ಮತ್ತೊಂದು ಮನೆಗೆ ಹೋಗಿ ಇಳುಕೊಳ್ಳಬೇಡಿರಿ. ಮತ್ತು ನೀವು ಯಾವ ಊರಿಗಾದರೂ ಹೋದಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಂಡರೆ ಅವರು ನಿಮಗೆ ಬಡಿಸಿದ್ದನ್ನು ಊಟಮಾಡಿ  ಅಲ್ಲಿರುವ ರೋಗಿಗಳಿಗೆ ವಾಸಿಮಾಡಿ ಅವರಿಗೆ – ದೇವರ ರಾಜ್ಯವು ಸಮೀಪಕ್ಕೆ ಬಂದದೆ ಎಂದು ಹೇಳಿರಿ. ಆದರೆ ನೀವು ಯಾವ ಊರಿಗಾದರೂ ಹೋದ ಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಳ್ಳದೇ ಹೋದರೆ ನೀವು ಆ ಊರ ಬೀದಿಗಳಿಗೆ ಬಂದು – ನಿಮ್ಮ ಊರಿಂದ ನಮ್ಮ ಕಾಲುಗಳಿಗೆ ಹತ್ತಿದ ಧೂಳನ್ನೂ ಒರಿಸಿಬಿಡುತ್ತೇವೆ; ಅದು ನಿಮಗೇ ಇರಲಿ; ಆದಾಗ್ಯೂ ದೇವರ ರಾಜ್ಯವು ಸಮೀಪಕ್ಕೇ ಬಂದದೆ ಎಂದು ನಿಮಗೆ ತಿಳಿದಿರಲಿ ಎಂಬದಾಗಿ ಹೇಳಿರಿ. ಆ ದಿವಸದಲ್ಲಿ ಅಂಥ ಊರಿನ ಗತಿಯು ಸೊದೋಮೂರಿಗಿಂತಲೂ ಕಠಿಣವಾಗಿರುವುದು ಎಂದು ನಿಮಗೆ ಹೇಳುತ್ತೇನೆ.

ಯೇಸು ಈ ಶಿಷ್ಯರನ್ನು ಹೇಗೆ ಕಳುಹಿಸುತ್ತಾನೆ ಎಂಬುದರ ಮೂಲಕ ನಾವು ಇನ್ನೂ ಭೇಟಿಯಾಗದ ಜನರ ಖಾಲಿ ಜಾಗವನ್ನು ಹೇಗೆ ಪ್ರವೇಶಿಸಬಹುದು ಎಂಬುದನ್ನು ನೋಡಬಹುದು.ಈ ವಚನಗಳಲ್ಲಿ, ನಾವು ಹೊಸ ಕ್ಷೇತ್ರಗಳನ್ನು ಪ್ರವೇಶಿಸಿದಾಗ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ತತ್ವಗಳನ್ನು ಕಲಿಯುತ್ತೇವೆ:

# ಮಾಡಬೇಕಾದ ಅಂಶಗಳು



ಇಬ್ಬಿಬ್ಬರಾಗಿ ಹೋಗಬೇಕು



ಹೆಚ್ಚಿನ ಕೆಲಸಗಾರರಿಗಾಗಿ ಪ್ರಾರ್ಥಿಸಿರಿ



ಉತ್ತಮ ಕುರುಬನನ್ನು ಅವಲಂಬಿಸಿ ತೋಳಗಳ ಮಧ್ಯೆ ಕುರಿಮರಿಗಳಂತೆ ಹೋಗಿರಿ



ಮನೆಯೊಳಗೆ ಪ್ರವೇಶಿಸಿರಿ



‘ಈ ಮನೆಗೆ ಶುಭವಾಗಲಿ!’
ಎಂದು ಹೇಳಿರಿ



ಯೇಸುವಿನ ಬಗ್ಗೆ ಸತ್ಯವನ್ನು
ಸ್ವೀಕರಿಸುವ ಸಮಾಧಾನ
ವ್ಯಕ್ತಿಯನ್ನು ಹುಡುಕಿರಿ



ಮನೆಯಲ್ಲಿ ಉಳಿಯಿರಿ



ಒದಗಿಸಿದ್ದನ್ನು ತಿನ್ನಿರಿ ಮತ್ತು
ಕುಡಿಯಿರಿ



ಗುಣವಾಗಲು ಪ್ರಾರ್ಥಿಸಿ



ಬರಲಿರುವ ದೇವರ ರಾಜ್ಯವಾದ ಸುವಾರ್ತೆಯನ್ನು ಸಾರಿರಿ



ಸ್ಥಳ ಅಥವಾ ವ್ಯಕ್ತಿಯನ್ನು ಹೇಗೆ ಮತ್ತು ಯಾವಾಗ ಬಿಡಬೇಕೆಂದು ತಿಳಿಯಿರಿ

## ಮಾಡಬಾರದಾದ ಅಂಶಗಳು



ಅವಶ್ಯಕ್ಕಿಂತ ಹೆಚ್ಚು ಜನರನ್ನು ಕರೆದುಕೊಳ್ಳಬಾರದು



ರಸ್ತೆಯಲ್ಲಿ ಯಾರನ್ನೂ ವಂದಿಸಬೇಡಿ ಅಥವಾ ದೇವರು ಎಲ್ಲಿಗೆ ನಡೆಸಬೇಕೆಂದಿರುತ್ತಾನೋ ಅಲ್ಲಿಂದ ವಿಚಲಿತರಾಗಬೇಡಿರಿ



# ಮನೆಯಿಂದ ಮನೆಗೆ ಹೋಗಬೇಡಿರಿ

ನಾವು ಇನ್ನೂ ಭೇಟಿಯಾಗದ ಜನರ ಖಾಲಿ ಕ್ಷೇತ್ರಗಳನ್ನು ಪ್ರವೇಶಿಸಿದಾಗ ನಾವು ಈ ತತ್ವಗಳನ್ನು ಅಳವಡಿಸಬಹುದು. ಕಳುಹಿಸಲ್ಪಟ್ಟವರಾಗಿರುವ ನಾವು, ನಮ್ಮ ಗಮನವು ಯೇಸುವಿನ ಬಗ್ಗೆ ಸತ್ಯವನ್ನು ಸ್ವೀಕರಿಸುವ ಮತ್ತು ಆತನನ್ನು ಅನುಸರಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಸಿದ್ದರಿರುವ ಶಾಂತಿಯ ವ್ಯಕ್ತಿಗಳನ್ನು ಕಂಡುಹಿಡಿಯಬೇಕು. ನಾವು ಈ ಜನರೊಂದಿಗೆ ಇರುತ್ತೇವೆ ಮತ್ತು ಅವರನ್ನು ನಂಬಿಕೆಯ ಹಂತಗಳಲ್ಲಿ ಮುನ್ನಡೆಸುತ್ತೇವೆ. ಈ ತತ್ವಗಳು ಪ್ರತಿಯೊಂದು ಸಂದರ್ಭಕ್ಕೂ ನೇರವಾಗಿ ಅನ್ವಯವಾಗದಿರಬಹುದು, ಆದರೆ ಅವು ನಮಗೆ ಹೊಸ ಜನರೊಂದಿಗೆ ಬೆರೆಯುವ ವಿಧಾನಕ್ಕೆ ಸಹಾಯಕವಾದ ಬುದ್ಧಿವಂತಿಕೆಯನ್ನು ಒದಗಿಸುತ್ತವೆ.

## ನಮಗೆ ಈಗಾಗಲೇ ತಿಳಿದಿರುವ ಜನರ ಖಾಲಿ ಜಾಗವನ್ನು ಪ್ರವೇಶಿಸುವುದು ಹೇಗೆ?

ಅಪೋಸ್ತಲರ ಕೃತ್ಯಗಳು 16:25–34:

> ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥನೆ ಮಾಡುವವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು; ಸೆರೆಯಲ್ಲಿದ್ದವರು ಲಕ್ಷಯವಿಟ್ಟು ಕೇಳುತ್ತಿದ್ದರು. ಅಕಸ್ಮಾತ್ತಾಗಿ ಮಹಾಭೂಕಂಪವುಂಟಾಯಿತು; ಸೆರೆಮನೆಯ ಅಸ್ತಿವಾರಗಳು ಕದಲಿದವು. ಅದೇ ಕ್ಷಣದಲ್ಲಿ ಕದಗಳೆಲ್ಲಾ ತೆರೆದವು, ಎಲ್ಲರ ಬೇಡಿಗಳು ಕಳಚಿಬಿದ್ದವು. ಸೆರೆಯ ಯಜಮಾನನು ನಿದ್ದೆಯಿಂದ ಎಚ್ಚೆತ್ತು ಸೆರೆಮನೆಯ ಕದಗಳು ತೆರೆದಿರುವುದನ್ನು ಕಂಡು ಸೆರೆಯಲ್ಲಿದ್ದವರು ಓಡಿಹೋದರೆಂದು ಭಾವಿಸಿ ಕತ್ತಿಯನ್ನು ಹಿರಿದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದನು. ಆದರೆ ಪೌಲನು ಮಹಾಶಬ್ದದಿಂದ ಕೂಗಿ ಅವನಿಗೆ – ನೀನೇನೂ ಕೇಡು ಮಾಡಿಕೊಳ್ಳಬೇಡ, ನಾವೆಲ್ಲರೂ ಇಲ್ಲೇ ಇದ್ದೇವೆ ಎಂದು ಹೇಳಲು ಅವನು – ದೀಪ ತರಬೇಕೆಂದು ಕೂಗಿ ಒಳಕ್ಕೆ ಹಾರಿ ನಡುಗುತ್ತಾ ಪೌಲ ಸೀಲರ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ಕರಕೊಂಡು ಬಂದು – ಸ್ವಾಮಿಗಳೇ, ನಾನು ರಕ್ಷಣೆ ಹೊಂದುವುದಕ್ಕೆ ಏನು ಮಾಡಬೇಕೆಂದು ಕೇಳಲು ಅವರು – ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆಹೊಂದುವಿ, ನಿನ್ನ

ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೂ ಮನೆಯಲ್ಲಿದ್ದವರಿಗೂ ದೇವರ ವಾಕ್ಯವನ್ನು ತಿಳಿಸಿದರು. ಆಮೇಲೆ ಅವನು ರಾತ್ರಿಯ ಅದೇ ಗಳಿಗೆಯಯಲ್ಲಿ ಅವರನ್ನು ಕರಕೊಂಡುಹೋಗಿ ಅವರ ಗಾಯಗಳನ್ನು ತೊಳೆದು ಕೂಡಲೇ ತಾನು ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನಮಾಡಿಸಿಕೊಂಡನು. ತರುವಾಯ ಅವರನ್ನು ತನ್ನ ಮನೆಗೆ ಕರಕೊಂಡು ಹೋಗಿ ಊಟಮಾಡಿಸಿದನು. ಅವನು ತನ್ನ ಮನೆಯವರೆಲ್ಲರ ಸಂಗಡ ನಂಬಿ ಉಲ್ಲಾಸಗೊಂಡನು.

ಎಲ್ಲರೂ ಯೇಸುವನ್ನು ನಂಬಬೇಕೆಂದು ಕರ್ತನು ಬಯಸುತ್ತಾನೆ, ಮತ್ತು ನಾವೂ ಇದನ್ನು ಬಯಸಬೇಕು. ಮತ್ತು ಸತ್ಯವೇದದಲ್ಲಿ ಆಗಾಗ್ಗೆ ಪುನರಾವರ್ತಿತವಾದ ಒಂದು ಮಾದರಿಯೆಂದರೆ, ಯೇಸುವನ್ನು ನಂಬುವ ಯಾರಾದರೂ ಮೊದಲು ತಮ್ಮ ಕುಟುಂಬಗಳನ್ನು ಮತ್ತು ಸ್ನೇಹಿತರನ್ನು ಯೇಸುವಿನಲ್ಲಿ ನಂಬುವಂತೆ ಆಹ್ವಾನಿಸಲು ಹೋಗುತ್ತಾರೆ.ಪೌಲನು ಸೀಲನು ಮತ್ತು ಸೆರೆಮನೆ ಅಧಿಕಾರಿ ವಿಷಯದಲ್ಲೂ ಇದೇ ಆಗಿದೆ. ಪೌಲನು ಮತ್ತು ಸಿಲನು ಸೆರೆಮನೆ ಅಧಿಕಾರಿಗೆ ತಾನು ಮತ್ತು ಅವನ ಮನೆಯವರು ರಕ್ಷಣೆ ಹೊಂದುವರು ಎಂದು ಹೇಳುತ್ತಾನೆ. ಆ ರಾತ್ರಿ ಯೇಸುವಿನ ಸಂದೇಶವು ಸೆರೆಮನೆ ಅಧಿಕಾರಿ ಮನೆಯವರಿಗೆ

ಹರಡಿತು. ಸೆರೆಮನೆ ಅಧಿಕಾರಿ ಕುಟುಂಬದವರು ನಂಬಿದರೂ ಮತ್ತು ಆ ರಾತ್ರಿ ದೀಕ್ಷಾಸ್ನಾನ ಮಾಡಿಸಿಕೊಂಡರು.



ನಾವು ಈಗಾಗಲೇ ತಿಳಿದಿರುವ ಜನರನ್ನು ಗಮನಿಸಿ ಅವರ ರಕ್ಷಣೆಯನ್ನು ಹುಡುಕುವುದು ಪರಿಣಾಮಕಾರಿ ಸಾಕ್ಷಿಗಳಾಗಲು ಒಂದು ಮಾರ್ಗವಾಗಿದೆ. ಇದನ್ನು ಮಾಡಲು, ಯೇಸುವನ್ನು ಅನುಸರಿಸದವರು ಯಾರು ಎಂದು ನಮಗೆ ತಿಳಿದಿರುವ ಕನಿಷ್ಠ 30 ಜನರ ಹೆಸರನ್ನು ಪಟ್ಟಿ ಮಾಡಲು ನಾವು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಈ ಜನರು ನಮಗೆ ಹತ್ತಿರವಾಗಿರುವವರಾಗಿರುತ್ತಾರೆ, ಆದರೆ ದೇವರಿಂದ ದೂರವಾಗಿರುತ್ತಾರೆ. ಈ ಜನರು ದೇವರೊಂದಿಗಿನ ಸಂಬಂಧದಲ್ಲಿ ಬೆಳೆಯುತ್ತಿರುವುದಿಲ್ಲ. ಈ ಜನರು ಕುಟುಂಬ ಸದಸ್ಯರು, ಸಹೋದ್ಯೋಗಿಗಳು, ಸಹಪಾಠಿಗಳು, ಅಂಗಡಿ ಮಾಲೀಕರು ಅಥವಾ ನಿಮಗೆ ತಿಳಿದಿರುವ ಯಾವುದೇ ವ್ಯಕ್ತಿಗಳಾಗಿರಬಹುದು. ಈ ಜನರ ಖಾಲಿ ಹೊಲಗಳಲ್ಲಿ ದೇವರು ನಮ್ಮನ್ನು ಉಪಯೋಗಿಸಬಹುದು.

ನಮ್ಮ ಪಟ್ಟಿಯನ್ನು ಮಾರ್ಗದರ್ಶಿಯಾಗಿ ಬಳಸಿಕೊಂಡು, ನಾವು ಯೇಸುವಿನ ಸುವಾರ್ತೆಯನ್ನು ಹಂಚಿಕೊಳ್ಳಬಹುದು, ಪ್ರೀತಿಸಬಹುದು, ಮತ್ತು ನಂಬಿಗಸ್ತರಾಗಿ ಪ್ರಾರ್ಥಿಸಬಹುದು.

## ಮೂವತ್ತು ಹೆಸರುಗಳ ಪಟ್ಟಿಮಾಡಿರಿ



**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ

ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.